ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಬುಧವಾರ, ದಿನಾಂಕ : 23 ನೇ ಸೆಪ್ಟೆಂಬರ್, 2020

ಸಮಾಜ ಕಲ್ಯಾಣ ಇಲಾಖೆಯ ಗಂಗಾ ಕಲ್ಯಾಣ ಯೋಜನೆ ಅಕ್ರಮಗಳ ಬಗ್ಗೆ

ಡಾ: ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) :-

327 (322) ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ ಮತ್ತು ಸಮಾಜ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ, ಭೋವಿ ಅಭಿವೃದ್ಧಿ ನಿಗಮ, ಆದಿ ಜಾಂಭವ ಅಭಿವೃದ್ಧಿ ನಿಗಮ, ವಾಲ್ಮೀಕಿ ಅಭಿವೃದ್ಧಿ ನಿಮಗಳಲ್ಲಿ 2015-16 ರಿಂದ 2019-20ರವರೆಗೆ ಗಂಗಾ ಕಲ್ಯಾಣ ಯೋಜನೆಯ ಕಾಮಾಗಾರಿಗಳಲ್ಲಿ ವಿಧಾನಸಭಾ ಕ್ಷೇತ್ರವಾರು ನಿಗಧಿಪಡಿಸಿದ ಗುರಿ, ವಿವೇಚನಾ ಕೋಟಾದಲ್ಲಿ ಮಂಜೂರು ಮಾಡಿದ ವಿಧಾನಸಭಾ ಕ್ಷೇತ್ರವಾರು ಸಂಖ್ಯೆ, ಈ ಎರಡೂ ಆಯ್ಕೆ ನಂತರ ಆಗಿರುವ ವಿಧಾನಸಭಾ ಕ್ಷೇತ್ರವಾರು ಪ್ರಗತಿ ವಿವರಗಳನ್ನು ಒದಗಿಸುವುದು;

(ಆ) ಈ ಕೊಳವೆ ಬಾವಿಗಳನ್ನು ಕೊರೆದು ಪಂಪ್‌ಸೆಟ್ ಅಳವಡಿಸಲು ಟೆಂಡರ್ ಕರೆಯಲಾಗಿದೆಯೇ ; ಕರೆದಿದ್ದಲ್ಲಿ, ಪ್ಯಾಕೇಜ್‌ವಾರು, ವಿಧಾನಸಭಾ ಕ್ಷೇತ್ರವಾರು, ಟೆಂಡರ್‌ನಲ್ಲಿ ನಿಗಧಿಪಡಿಸಿದ ಗುರಿ ಎಷ್ಟು; (ಟೆಂಡರ್ ಪ್ರಕಟಣೆ ಪ್ರತಿ ಒದಗಿಸುವುದು)

(ಇ) ಈ ಯೋಜನೆಯ ಒಟ್ಟು ಗುರಿಯ ಪೈಕಿ ಶೇ.80ಕ್ಕೆ ಮಾತ್ರ ಟೆಂಡರ್ ಕರೆದು, ವಿವೇಚನಾ ಕೋಟಾದಲ್ಲಿ ಆಯ್ಕೆ ಆದ ಶೇ.20 ರಷ್ಟು ಫಲಾನುಭವಿಗಳ ಗಂಗಾ ಕಲ್ಯಾಣ ಕಾಮಗಾರಿಗಳನ್ನು ಟೆಂಡರ್ ಕರೆಯದೆ ಅಧಿಕಾರಿಗಳಿಗೆ ಇಷ್ಟ ಬಂದ ಗುತ್ತಿಗೆದಾರರ ಮೂಲಕ ಅಕ್ರಮವಾಗಿ ಕಾಮಗಾರಿ ಮಾಡಿ ಭ್ರಷ್ಟಾಚಾರ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಕಳೆದ ನಾಲ್ಕು ವರ್ಷಗಳಲ್ಲಿ 250 ಕೋಟಿಗಳಿಗೂ ಅಧಿಕ ಅಕ್ರಮ ಮಾಡಿರುವುದಾಗಿ ಸಾರ್ವಜನಿಕರು, ದಲಿತ ಸಂಘಗಳು ಸರ್ಕಾರಕ್ಕೆ ದೂರು ನೀಡಿದ್ದು, ಈ ಬಗ್ಗೆ ಸರ್ಕಾರವು ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಯಾವ ಕ್ರಮ ಕೈಗೊಂಡಿದೆ ? (ಮಾಹಿತಿ ನೀಡುವುದು)